## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

**ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 7/2020**

ಫ್ರಾಸಾ-12

ಚಾಸಾ-25

| | | |
|---|---|---|
| ಸಾಕ್ಷಿಯ ಹೆಸರು | - | ಹೆಚ್ ಕೊಟ್ರೇಶ |
| ತಂದೆಯ ಹೆಸರು | - | ಹೆಚ್ ಪರಶುರಾಮಪ್ಪ |
| ವಯಸ್ಸು | - | 53 ವರ್ಷ |
| ಉದ್ಯೋಗ | - | ಸಹಾಯಕ ರಾಸಾಯನಿಕ ಪರೀಕ್ಷಕರು , ಪ್ರಾದೇಶಿಕ ಪ್ರಯೋಗಾಲಯ , ಧಾರವಾಡ |
| ವಾಸಸ್ಥಳ | - | ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 10-02-2025. |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನವೆಂಬರ 2009 ರಿಂದ ನಾನು ಧಾರವಾಡದ ಪ್ರಾದೇಶಿಕ ಪ್ರಯೋಗಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 5-9-2020 ರಂದು ಪೋಲೀಸ ಉಪನಿರೀಕ್ಷಕರು ಎಲ್ ಆ್ಯಂಡ್ ಓ ಸಬ ಅರ್ಬನ ಪೋಲಿಸಠಾಣೆ ಹುಬ್ಬಳ್ಳಿರವರು ಈ ಪ್ರಕರಣದ 3 ಸೀಲು ಮಾಡಿದ ಮಾದರಿ ಗಾಂಜಾ ಪ್ಯಾಕೇಟಗಳನ್ನು ಮನವಿ ಪತ್ರದೊಂದಿಗೆ ಪೇದೆ 2691 ರವರ ಮೂಲಕ ಕಳುಹಿಸಿಕೊಟ್ಟಿದ್ದರು. ಮಾದರಿ ಸೀಲು ಹಾಗೂ ಮಾದರಿ ಗಾಂಜಾದ ಮೇಲಿದ್ದ ಸೀಲು ಸುಸ್ಥಿತಿಯಲ್ಲಿದ್ದು ಒಂದಕ್ಕೊಂದು ತಾಳೆಯಾಗುತ್ತಿತ್ತು.

3. ದಿಃ 10-9-2020 ರಂದು ಎಸ್-1 ಮತ್ತು ಎಸ್-2 ಎಂದು ಗುರುತು ಮಾಡಿದ ಪ್ರತಿಯೊಂದರಲ್ಲೂ 100 ಗ್ರಾಂ ಗಾಂಜಾ ಇದ್ದ ಹಾಗೂ ಎಸ್ -3 ಎಂದು ಗುರುತು ಮಾಡಿದ 50 ಗ್ರಾಂ ಗಾಂಜಾ ಇದ್ದ ಮಾದರಿ ಗಾಂಜಾವನ್ನು ಭೌತಿಕ ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಎಲೆಗಳು, ಹೂವು, ಮೊಗ್ಗು ಇದ್ದುದು ಕಂಡುಬಂದಿತು. ಅವುಗಳ ಬಣ್ಣ ತುಕ್ಕು ಹಿಡಿದ ಕಬ್ಬಿಣದ ಬಣ್ಣಕ್ಕೆ ಹೋಲಿಕೆಯಾಗುತ್ತಿತ್ತು ಮತ್ತು ಗಾಂಜಾದ ಘಾಟು ವಾಸನೆಯಿಂದ ಕೂಡಿತ್ತು. ಸೂಕ್ಷ್ಮ ದರ್ಶಕ ಯಂತ್ರದ ಮೂಲಕ ಪರೀಕ್ಷಿಸಿದಾಗ

ಅದರಲ್ಲಿ ಗಾಂಜಾದ ಹೇರ್ ಗಳು ಕಂಡುಬಂದವು. ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಗಾಂಜಾದ ಗುಣಲಕ್ಷಣಗಳ ಧನಾತ್ಮಕ ಫಲಿತಾಂಶ ನೀಡಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಮೇಲಿನ ಎಲ್ಲ ಪರೀಕ್ಷೆಗಳಲ್ಲಿ ನನಗೆ ಕಳುಹಿಸಿದ ಮಾದರಿ ಗಾಂಜಾದ ಗುಣಲಕ್ಷಣಗಳಿಂದ ಕೂಡಿತ್ತು . ಈ ಬಗ್ಗೆ ನಾನು ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಪ್ರಮಾಣಪತ್ರವನ್ನು ನಿಶಾನೆ ಪಿಃ 79 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 79 (ಎ) ಎಂದು ಗುರುತಿಸಲಾಯಿತು.

4. ದಿಃ 18-9-2020 ರಂದು ಪೋಲೀಸ ಉಪನಿರೀಕ್ಷಕರು ಎಲ್ ಆ್ಯಂಡ್ ಓ ಸಬ ಅರ್ಬನ ಪೋಲಿಸಠಾಣೆ ಹುಬ್ಬಳ್ಳಿರವರು ಈ ಪ್ರಕರಣದ ಒಂದು ಸೀಲು ಮಾಡಿದ ಮಾದರಿ ಗಾಂಜಾ ಪ್ಯಾಕೇಟನ್ನು ಮನವಿ ಪತ್ರದೊಂದಿಗೆ ಪೇದೆ 2492 ರವರ ಮೂಲಕ ಕಳುಹಿಸಿಕೊಟ್ಟಿದ್ದರು. ಮಾದರಿ ಸೀಲು ಹಾಗೂ ಮಾದರಿ ಗಾಂಜಾದ ಮೇಲಿದ್ದ ಸೀಲು ಸುಸ್ಥಿತಿಯಲ್ಲಿದ್ದು ಒಂದಕ್ಕೊಂದು ತಾಳೆಯಾಗುತ್ತಿತ್ತು.

5. ದಿಃ 15-10-2020 ರಂದು ಎಸ್-1 ಎಂದು ಗುರುತು ಮಾಡಿದ 100 ಗ್ರಾಂ ಗಾಂಜಾ ಇದ್ದ ಮಾದರಿ ಗಾಂಜಾವನ್ನು ಭೌತಿಕ ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಎಲೆಗಳು, ಹೂವು, ಮೊಗ್ಗು ಇದ್ದುದು ಕಂಡುಬಂದಿತು. ಅವುಗಳ ಬಣ್ಣ ತುಕ್ಕು ಹಿಡಿದ ಕಬ್ಬಿಣದ ಬಣ್ಣಕ್ಕೆ ಹೋಲಿಕೆಯಾಗುತ್ತಿತ್ತು ಮತ್ತು ಗಾಂಜಾದ ಘಾಟು ವಾಸನೆಯಿಂದ ಕೂಡಿತ್ತು. ಸೂಕ್ಷ್ಮ ದರ್ಶಕ ಯಂತ್ರದ ಮೂಲಕ ಪರೀಕ್ಷಿಸಿದಾಗ ಅದರಲ್ಲಿ ಗಾಂಜಾದ ಹೇರ್ ಗಳು ಕಂಡುಬಂದವು. ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಗಾಂಜಾದ ಗುಣಲಕ್ಷಣಗಳ ಧನಾತ್ಮಕ ಫಲಿತಾಂಶ ನೀಡಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಮೇಲಿನ ಎಲ್ಲ ಪರೀಕ್ಷೆಗಳಲ್ಲಿ ನನಗೆ ಕಳುಹಿಸಿದ ಮಾದರಿ ಗಾಂಜಾದ ಗುಣಲಕ್ಷಣಗಳಿಂದ ಕೂಡಿತ್ತು . ಈ ಬಗ್ಗೆ ನಾನು ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಪ್ರಮಾಣಪತ್ರವನ್ನು ನಿಶಾನೆ ಪಿಃ 80 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ

ಪಿಃ 80 (ಎ) ಎಂದು ಗುರುತಿಸಲಾಯಿತು. ಮುದ್ದೆಮಾಲು-1 ರಿಂದ 3 ಹಾಗೂ 8 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು 1 ರಿಂದ 4 ನೇ ಆರೋಪಿಗಳ ಪರವಾಗಿ ಶ್ರೀ ವಿ. ಜಿ .ಎಚ್ ವಕೀಲರಿಂದಃ**

6. ನಿಶಾನೆ ಪಿಃ 79 ಹಾಗೂ 80 ದಾಖಲೆಗಳು ಕಂಪ್ಯೂಟರನಲ್ಲಿ ಟೈಪ ಮಾಡಿದ ದಾಖಲೆಗಳು ಅಂದರೆ ಸರಿ. ಒಂದು ಫಾರಮ್ಯಾಟನಲ್ಲಿ ತೆಗೆದ ದಾಖಲೆಗಳು ಅಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲಿ ಇನವರ್ಡ ಹಾಗೂ ಔಟವರ್ಡ ರಜಿಸ್ಟರಗಳು ಇವೆ ಅಂದರೆ ಸರಿ. ನಮಗೆ ಬಂದ ವಸ್ತುಗಳ ತೂಕವನ್ನು ಮಾಡಿದ ನಂತರ ನಾನು ಪರೀಕ್ಷೆ ಮಾಡುತ್ತೇನೆ ಎಂದರೆ ಸಾಕ್ಷಿ ಕೆಲವು ಬಾರಿ ತೂಕ ಮಾಡುತ್ತೇವೆ ಕೆಲವು ಬಾರಿ ಮಾಡುವುದಿಲ್ಲ ಎಂದು ನುಡಿದಿರುತ್ತಾರೆ. ನಿಶಾನೆ ಪಿಃ 79 ಹಾಗೂ 80 ರಲ್ಲಿ ನಾನು ಪರೀಕ್ಷೆಗೆ ತೆಗೆದುಕೊಂಡ ಪ್ರಮಾಣ ಹಾಗೂ ಪರೀಕ್ಷೆ ಆದ ನಂತರ ಉಳಿದ ಪ್ರಮಾಣ ನಮೂದಿಸಿಲ್ಲ ಎಂದರೆ ಸಾಕ್ಷಿ ಸದರಿ ವಿವರಗಳು ಲಾಗ್ ಪುಸ್ತಕದಲ್ಲಿರುತ್ತವೆ ಎಂದು ನುಡಿದಿದ್ದಾರೆ .

7. ರಾಸಾಯನಿಕ ಪರೀಕ್ಷೆ ಮಾಡುವಾಗ ಹಲವಾರು ಪರೀಕ್ಷೆಗಳು ಇವೆ ಅಂದರೆ ಸರಿ. ಕ್ಯಾಟಲಿಸ್ಟ ಹಾಕಿ ರಾಸಾಯನಿಕ ಪರೀಕ್ಷೆ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ನಾವು ಕ್ಯಾಟಲಿಸ್ಟನ್ನು ಈ ಪರೀಕ್ಷೆಗೆ ಉಪಯೋಗಿಸುವುದಿಲ್ಲ ಎಂದು ನುಡಿದಿದ್ದಾರೆ. ಪೋಲೀಸರ ಮಾತನ್ನು ಕೇಳಿ ಈ ಕೇಸಗೆ ಅನುಕೂಲವಾಗುವಂತೆನಾನು ನಿಶಾನೆ ಪಿಃ 79 ಮತ್ತು 80 ದಾಖಲೆಗಳನ್ನು ಸೃಷ್ಟಿಸಿ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ಮುಮಾ-1 ರಿಂದ 3 ಹಾಗೂ 8 ನ್ನು ನಾನು ಪರೀಕ್ಷಿಸಿರುವುದಿಲ್ಲ ಅಂದರೆ ಸರಿಯಲ್ಲ. .

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**( ಬಿ. ಜಿ. ರಮಾ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

ಎನ್.ಡಿ.ಪಿ.ಎಸ್. ಸಂಖ್ಯೆ: 7/2020

ಫ್ರಾಸಾ.12